# ಭಾಗ–1
# ಂಗೀತಗಾರರನ್ನು ಕುರಿತು

ಸಂಗೀತಗಾರರನ್ನು ಕುರಿತ ಐದು ಲೇಖನಗಳು ಇಲ್ಲಿವೆ.

ತಾವು ನೆಚ್ಚಿಕೊಂಡಿದ್ದ ಸಂಗೀತವನ್ನು ಗೌರವಿಸುತ್ತಾ, ಪ್ರಶ್ನಿಸುತ್ತಾ ತಮ್ಮದೇ ಆದ ಭಿನ್ನ ದಾರಿಯನ್ನು ಕಂಡುಕೊಂಡ ಜಿಎನ್‌ಬಿ; ಸ್ವಲ್ಪವೂ ರಾಜಿಮಾಡಿಕೊಳ್ಳದೆ, ಹೊರಗಿನ ಒತ್ತಾಯಗಳಿಗೆ ಮಣಿಯದೆ ತಾವು ನಂಬುವ ಸಂಗೀತಕ್ಕೆ ನಿಷ್ಠರಾಗಿ ಉಳಿದ ಕಿಶೋರಿ ಅಮೋಣ್ಕರ್; ನಿರಂತರವಾಗಿ, ಜೀವನದುದ್ದಕ್ಕೂ ಕಲಿಯುತ್ತಾ, ತಮ್ಮ ಸಂಗೀತವನ್ನು ಶ್ರೀಮಂತಗೊಳಿಸಿಕೊಳ್ಳುತ್ತಾ ಸಾಗಿದ ಎಂಎಸ್‌; ತನ್ನ ತಲೆಮಾರಿನ ಎಲ್ಲಾ ಯುವಸಂಗೀತಗಾರರನ್ನು ಪ್ರಭಾವಿಸಿದ ಹಾಗೂ ಒಂದರ್ಥದಲ್ಲಿ ಅವರಿಗೆ ಮಾರ್ಗದರ್ಶಿಯೂ ಆದ ಇಂದಿನ ಜೀವಂತ ದಂತಕಥೆ ಸಂಜಯ್ ಸುಬ್ರಹ್ಮಣ್ಯಂ; ರಾಗರಸವನ್ನು ಸಂಪೂರ್ಣವಾಗಿ ಹಿಂಡಿ ಶ್ರೋತೃಗಳಿಗೆ ನೀಡಿಬಿಡುತ್ತಿದ್ದ ವಿ ವಿ ಸುಬ್ರಹ್ಮಣ್ಯಂ ಅವರುಗಳನ್ನು ಕುರಿತ ಲೇಖನಗಳು ಇವರ ಸಂಗೀತವನ್ನು ಕುರಿತ ಒಳನೋಟವನ್ನು ನೀಡುತ್ತವೆ. ಜೊತೆಗೆ ಇವರ ಸಂಗೀತವನ್ನು ಅರ್ಥಮಾಡಿಕೊಳ್ಳುವುದಕ್ಕೆ ನೆರವಾಗುತ್ತವೆ.



# ಜಿಎನ್‌ಬಿ ಅವರ ಸಂಗೀತದ ಪ್ರಭಾವ

ಒಬ್ಬ ಕಲಾವಿದ ತನ್ನ ಕ್ಷೇತ್ರವನ್ನು ಹೇಗೆ ಶ್ರೀಮಂತಗೊಳಿಸಿದ್ದಾನೆ ಮತ್ತು ಅದನ್ನು ಹೇಗೆ ಪ್ರಭಾವಿಸಿದ್ದಾನೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದಕ್ಕೆ ನಮಗೆ ಎರಡು ದಾರಿಗಳಿವೆ. ಅವನು ಬದುಕಿದ್ದಾಗ ಅವನ ವಿಚಾರ ಹಾಗೂ ಕಲ್ಪನೆಗಳನ್ನು ಅವನ ಕಲೆ ಎಷ್ಟು ಗಟ್ಟಿಯಾಗಿ ಅಭಿವ್ಯಕ್ತಿಸುತ್ತಿತ್ತು ಎನ್ನುವುದು ಒಂದಾದರೆ, ಅವನು ಕಾಲವಾದ ನಂತರ, ಮುಂದಿನ ತಲೆಮಾರಿನವರು ಅವನ ವಿಚಾರ, ಕಲ್ಪನೆ ಹಾಗೂ ಗ್ರಹಿಕೆಗಳನ್ನು ಮರುವ್ಯಾಖ್ಯಾನಿಸಿ, ಅವನ ಮೂಲಕಲ್ಪನೆಗೆ ವಿಭಿನ್ನ ಆಯಾಮಗಳನ್ನು ನೀಡಲು ಹೇಗೆ ಪ್ರಯತ್ನಿಸಿದ್ದಾರೆ ಎನ್ನುವುದನ್ನು ಗಮನಿಸುವುದು ಎರಡನೆ ಮಾರ್ಗ.

ಜಿಎನ್‌ಬಿಯವರ ಸಂಗೀತದ ವಿಶ್ಲೇಷಣೆ ತುಂಬಾ ಕಷ್ಟ. ಏಕೆಂದರೆ ಅವರ ಸಂಗೀತದಲ್ಲಿ ಒಂದು ಕ್ರಮಬದ್ಧತೆ ಮತ್ತು ಒಂದು ಗಾಢ ಚಿಂತನೆ ಇದೆ. ಇವು ಅವರ ಸಂಗೀತದ ಓಘ, ಚೈತನ್ಯ ಹಾಗು ಸಹಜ ಪ್ರತಿಭೆಯ ಉಜ್ವಲ ಪ್ರಕಾಶದಲ್ಲಿ ಮರೆಯಾಗಿಬಿಡುತ್ತವೆ. ಒಬ್ಬ ಕಲಾವಿದ ವಿಶ್ಲೇಷಣಾತ್ಮಕವಾಗಿ ಮತ್ತು ಕ್ರಮಬದ್ಧವಾಗಿ ಯೋಚಿಸಲು ತೊಡಗಿದರೆ ಅವನ ಸಹಜ ಪ್ರವೃತ್ತಿ



ಮತ್ತು ಸಾಮರ್ಥ್ಯ ಮುರುಟಿಹೋಗುತ್ತದೆ ಎನ್ನುವ ಭಾವನೆಯಿದೆ. ಆದರೆ ಜಿಎನ್‌ಬಿ ಇದಕ್ಕೊಂದು ಅಪವಾದ. ಸಂಗೀತವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ, ಅಧ್ಯಯನ ಮಾಡಿದ್ದರಿಂದ ಈ ಮಹಾನ್ ಕಲಾವಿದನ ಸಹಜ ಪ್ರತಿಭೆ ಮತ್ತಷ್ಟು ಬೆಳಗಿದೆ.

ನಾನೆಂದೂ ಭೇಟಿಯಾಗಿರದ ಸಂಗೀತಗಾರನ ಸಂಗೀತಾತ್ಮಕ ಆಲೋಚನೆಗಳು ಏನಿದ್ದಿರಬಹುದು ಎನ್ನುವುದನ್ನು ಅವರ ಧ್ವನಿಮುದ್ರಿಕೆಗಳನ್ನು ಆಲಿಸಿ ಅರ್ಥೈಸಿಕೊಳ್ಳುವ ಪ್ರಯತ್ನ ನನ್ನ ಪಾಲಿಗೊಂದು ರೋಚಕ ಅನುಭವ. ತಮ್ಮ ಆಲೋಚನೆ ಮತ್ತು ಪ್ರಯೋಗಗಳ ಬಗ್ಗೆ ಅವರು ಹಲವರೊಡನೆ ಚರ್ಚಿಸಿರಬಹುದು. ಆದರೆ ಕೇವಲ ಅವರ ಸಂಗೀತವನ್ನು ಕೇಳಿ ಅವರ ಆಲೋಚನೆಗಳನ್ನು ಅರ್ಥಮಾಡಿಕೊಳ್ಳಲು ಹೋದಾಗ, ಅದು ಕಟ್ಟಿಕೊಡುವ ಚಿತ್ರದ ಸೊಗಸೇ ಬೇರೆ.

ಅವರ ಸಂಗೀತದ ಕಲಾತ್ಮಕತೆಯನ್ನೇ ಧ್ಯಾನಿಸುತ್ತಿದ್ದಾಗ ನನಗೆ ಥಟ್ಟನೆ ಹೊಳೆದದ್ದು ಅವರ ಗಮಕಗಳಲ್ಲಿನ ಕಂಪನದ ಪ್ರಮಾಣಬದ್ಧತೆ. ಅವರ ಸಮಕಾಲೀನರ ಗಾಯನದಲ್ಲಿನ ಗಮಕಗಳಿಗೆ ಹೋಲಿಸಿದರೆ ಜಿಎನ್‌ಬಿ ಹಾಡುವಾಗ ಗಮಕಗಳಲ್ಲಿ ಸ್ವರಗಳ ಕಂಪನ ಅವಶ್ಯಕತೆಗಿಂತ ಸ್ವಲ್ಪವೂ ಹೆಚ್ಚಿಗೆ ಇರುತ್ತಿರಲಿಲ್ಲ. ಅದು ಅತ್ಯಂತ ನಿಖರವಾಗಿ, ಒಪ್ಪವಾಗಿರುತ್ತಿತ್ತು. ತೋಡಿ, ಕಾಂಬೋಧಿಯಂತಹ ರಾಗಗಳ ಗಮಕಪ್ರಯೋಗದಲ್ಲಿ ಕೂಡ ಈ ಕನಿಷ್ಠೀಯತೆ (ಮಿನಿಮಲಿಸಂ) ಇತ್ತು. ಮುಸಿರಿ ಮತ್ತು ಅರಿಯಾಕ್ಕುಡಿಯವರಿಗೆ ಹೋಲಿಸಿದಾಗಲೂ ಈ ವ್ಯತ್ಯಾಸ ಎದ್ದುಕಾಣುತ್ತದೆ. ಇಲ್ಲಿ ಕನಿಷ್ಠೀಯತೆ (ಮಿನಿಮಲಿಸಂ)ಎಂದ ಕೂಡಲೆ ಅವರು ಕಡಿಮೆ ಗಮಕ ಬಳಸುತ್ತಿದ್ದರು ಎಂದು ಭಾವಿಸಬಾರದು. ಸ್ವರ ಸಂಚಾರಗಳಲ್ಲಿನ ಕಂಪನ ಅವಶ್ಯಕತೆಗಿಂತ ಸ್ವಲ್ಪವೂ ಹೆಚ್ಚಿರುತ್ತಿರಲಿಲ್ಲ ಎಂದು ಹೇಳುವುದಕ್ಕೆ ಈ ಪದ ಬಳಸುತ್ತಿದ್ದೇನೆ. ತೋಡಿರಾಗದ ಗಗ ರಿರಿ ಎನ್ನುವ ಅತ್ಯಂತ ಸರಳ ಸ್ವರಗಳನ್ನೂ ಕೂಡ ಅವರು ಅತ್ಯಂತ ಸಂಯಮದಿಂದ ಬಳಸುತ್ತಿದ್ದರು. ಗಾಂಧಾರವನ್ನು ಬೇಕಾದ್ದಕ್ಕಿಂತ ಸ್ವಲ್ಪ ಕೂಡ ಹೆಚ್ಚಾಗಿ ಕಂಪಿಸುತ್ತಿರಲಿಲ್ಲ. ಸಂದರ್ಭ ಏನೇ ಇರಲಿ, ಅಪ್ಪಿತಪ್ಪಿಯೂ ಯಾವುದೇ ಗಮಕದ ಬಳಕೆಯಲ್ಲೂ ಉತ್ಪ್ರೇಕ್ಷೆ ಇರುತ್ತಿರಲಿಲ್ಲ. ಹೀಗೆ ಗಮಕಗಳ ಬಳಕೆಗೆ ತಾವೇ ಒಂದು ಬಗೆಯ ಸಂಯಮವನ್ನು ರೂಪಿಸಿಕೊಂಡಿದ್ದರು. ಸಾಮಾನ್ಯವಾಗಿ ಜಿಎನ್‌ಬಿ ಅವರ ಸಂಗೀತ ಕೇಳುವಾಗ ನಮಗೆ ದೊರಕುವುದು ನೇರ, ನಿಖರ ಕಲಾನುಭವ. ಶಹನದಂತಹ ರಾಗಗಳನ್ನು ಹಾಡುವಾಗಲೂ ಅವರು ಯಾವುದೇ ಸುತ್ತುಬಳಸು ಇಲ್ಲದೆ ಅತ್ಯಂತ ನೇರ, ಪ್ರಾಮಾಣಿಕ ರಸಾನುಭವವನ್ನು ಸೃಷ್ಟಿಸುತ್ತಿದ್ದರು. ಇದೇ ಸವಿ, ಕಂಪು, ವೈಶಿಷ್ಟ್ಯಗಳು ಅವರ ಬಿರ್ಕಾಗಳಲ್ಲಿಯೂ ಇವೆ. ಉಳಿದ ಮಹಾನ್ ಸಂಗೀತಗಾರರ ಬಿರ್ಕಾಗಳೊಳಗಿರುವ ಗಮಕದಲ್ಲಿ ಒಂದು ಸೂಕ್ಷ್ಮವಾದ ಕಂಪನ ಕಂಡುಬರುತ್ತದೆ. ಆದರೆ ಜಿಎನ್‌ಬಿ ಅವರ ಬಿರ್ಕಾದಲ್ಲಿ ಇಂತಹ ಕಂಪನ ಇರುವುದೇ ಇಲ್ಲ. ಅವರು ಅಷ್ಟು ವೇಗದಲ್ಲಿ ಸ್ವರಗಳನ್ನು ಹಾಡುವಾಗಲೂ ಒಂದೇ ಒಂದು ಅನವಶ್ಯಕವಾದ ಗಮಕ ಎಲ್ಲೂ ಬರುವುದಿಲ್ಲ. ಶುದ್ಧವಾದ ದ್ರುತಕಾಲದ ಬಿರ್ಕಾ ಎಂದರೆ ಇದೇ!!

ಈ ಸಂಯಮ ನಮ್ಮನ್ನು 'ಅಳವು' ಅಂದರೆ ಪ್ರಮಾಣಬದ್ಧತೆ ಅಥವಾ ಹದ ಎನ್ನುವ ವಿಷಯದತ್ತ ಕೊಂಡೊಯ್ಯುತ್ತದೆ. ಸಾಮಾನ್ಯವಾಗಿ ರಾಗದ ಪ್ರತಿಯೊಂದು ಸಂಗತಿಯನ್ನೂ ಎಷ್ಟು ವೇಗವಾಗಿ ಹಾಡಬೇಕು ಮತ್ತು ಎಷ್ಟು ಹಾಡಬೇಕು ಎನ್ನುವುದಕ್ಕೊಂದು ಹದವಿರುತ್ತದೆ. ಈ ಹದ ಕಲಾವಿದನಿಂದ ಕಲಾವಿದನಿಗೆ ಬೇರೆಯಾಗುತ್ತದೆನ್ನುವುದು ನಿಜ. ಆದರೂ ಹೇಗೆ ಹಾಡಬೇಕು, ಎಷ್ಟು ಹಾಡಬೇಕು

ಎನ್ನುವುದಕ್ಕೆ ಸಾಧಾರಣವಾಗಿ ಒಪ್ಪಿತವಾದ ಒಂದು ಪ್ರಮಾಣವಿರುತ್ತದೆ. ಈ ಪ್ರಮಾಣದ ಪರಿಪೂರ್ಣ ಹದ, ಪಾಕ, ಜಿಎನ್‌ಬಿ ಅವರಿಗೆ ಸಿದ್ಧಿಸಿತ್ತೆನಿಸುತ್ತದೆ. ಜಿಎನ್‌ಬಿ ಅವರ ಆಲಾಪನೆ ಮತ್ತು ಅವರು ಹಾಡುತ್ತಿದ್ದ ಕೃತಿಗಳ ಪ್ರತಿ ಸಂಗತಿಯ ಪ್ರಸ್ತುತಿ, ಅವು ಇರಬೇಕಾದ ಕಾಲಪ್ರಮಾಣದಲ್ಲೇ ನಿಖರವಾಗಿ ಇರುತ್ತಿತ್ತು. ಅವರ ಹಾಡಿಕೆಯನ್ನು ಕೇಳುವಾಗ ಈ ಸಂಚಾರ ಅನಗತ್ಯವಾಗಿ ವಿಳಂಬವಾಗಿದೆ ಅಥವಾ ಇದನ್ನು ಇಷ್ಟು ವೇಗವಾಗಿ ಹಾಡಬೇಕಾಗಿರಲಿಲ್ಲ ಎನ್ನುವ ಭಾವನೆ ಮೂಡುವುದಿಲ್ಲ. ಬಹುಶಃ ಅವರಲ್ಲಿರುವ ಒಂದು ವಿಲಕ್ಷಣ ಸಹಜ ಪ್ರವೃತ್ತಿಯಿಂದಾಗಿಯೇ ಇದು ಸಾಧ್ಯವಾಗಿದೆ ಎನಿಸುತ್ತದೆ. ಇದು ಕೇವಲ ಅಭ್ಯಾಸದಿಂದ ಬರುವಂಥದ್ದು ಎಂದು ನನಗನ್ನಿಸುವುದಿಲ್ಲ. ನಾನು ಹೀಗೆ ಆಲೋಚಿಸುವುದು ತಪ್ಪಿರಬಹುದು. ಜಿಎನ್‌ಬಿಯವರಲ್ಲಿ ಕಂಡುಬರುವಂಥ ಪರಿಪೂರ್ಣ, ಕ್ರಮಬದ್ಧ, ಸುವ್ಯವಸ್ಥಿತ ಆಲಾಪನಾ ಕ್ರಮ ಅರಿಯಾಕ್ಕುಡಿ, ಮಹಾರಾಜಪುರಂ ವಿಶ್ವನಾಥ ಅಯ್ಯರ್ ಮತ್ತು ಇನ್ನಿತರರ ಆಲಾಪನೆಯಲ್ಲಿ ಕಾಣುವುದಿಲ್ಲ. ಆದರೆ ಇದು ಶೆಮ್ಮಂಗುಡಿಯವರಲ್ಲಿ ಕಂಡುಬರುತ್ತದೆ. ಬಹುಶಃ ಅವರಿಬ್ಬರ ಸಂಗೀತವೂ ನಾದಸ್ವರದಿಂದ ಪ್ರಭಾವಿತವಾದುದೇ ಇದಕ್ಕೆ ಕಾರಣವಿರಬಹುದೇನೋ? ಅವರಿಬ್ಬರಲ್ಲಿ ಜಿಎನ್‌ಬಿಯವರ ಆಲಾಪನೆ ಹೆಚ್ಚು ಕ್ರಮಬದ್ಧವೆನಿಸುತ್ತದೆ. ಪ್ರಮುಖ ರಾಗಗಳ ಪ್ರಸ್ತುತಿಗೆ ಸಂಬಂಧಿಸಿದಂತೆ ಇದು ತುಂಬಾ ಸತ್ಯ. ಇವರ ಈ ಕ್ರಮಬದ್ಧತೆಯನ್ನು ಹಾಗೇ ಗ್ರಾಫಿನಲ್ಲಿ ತೋರಿಸಿಬಿಡಬಹುದು. ಹೀಗೆ ರಾಗವನ್ನು ಹಂತ ಹಂತವಾಗಿ ಬೆಳೆಸಿ ಪರಾಕಾಷ್ಠತೆಗೆ ಕೊಂಡೊಯ್ಯುವ ಪರಿಪಾಠ ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಪಲ್ಲವಿಯ ಪ್ರಸ್ತುತಿಗೆ ಮೊದಲು ಜಿಎನ್‌ಬಿ ಮಾಡುತ್ತಿದ್ದ ಆಲಾಪನೆಯಲ್ಲಿ ಕೆಲವೊಮ್ಮೆ ನಾಲ್ಕು ಹಂತಗಳಿರುತ್ತಿದ್ದವು. ಪ್ರತಿಯೊಂದು ಹಂತವೂ ಹಿಂದಿನ ಹಂತದ ತಾರ್ಕಿಕ ಮುಂದುವರಿಕೆಯೇ ಆಗಿರುತ್ತಿತ್ತು. ರಾಗವನ್ನು ಬೆಳೆಸುವಾಗ ವಿಭಿನ್ನ ಕಾಲಪ್ರಮಾಣಗಳನ್ನು ಜಿಎನ್‌ಬಿ ಅತ್ಯಂತ ಸಂಯಮದಿಂದ, ಹದವಾಗಿ ಬಳಸುತ್ತಿದ್ದರು. ಮನೋಧರ್ಮದಿಂದ ರಾಗವನ್ನು ವಿಸ್ತರಿಸುವ ಸಂದರ್ಭದಲ್ಲೂ ಅವರು ತಮ್ಮ ಈ ಕ್ರಮವನ್ನು ಉಳಿಸಿಕೊಂಡಿದ್ದರು. ಬಿರ್ಕಾದ ಸಂಗತಿಗೂ ಮತ್ತು ಧ್ರುತಕಾಲದ ಸಂಗತಿಗೂ ತುಂಬಾ ಸ್ಪಷ್ಟವಾದ ವ್ಯತ್ಯಾಸವಿದೆ. ಹೆಚ್ಚಿನ ಸಲ ಅವೆರಡೂ ಒಂದೇ ಎಂದು ನಾವು ತಪ್ಪಾಗಿ ಗ್ರಹಿಸಿಬಿಡುತ್ತೇವೆ. ಕಲಾವಿದರು ಧ್ರುತಕಾಲದಲ್ಲಿ ಹಾಡಿದಾಗ ನಾವದನ್ನು ಬಿರ್ಕಾ ಎಂದು ಭಾವಿಸುತ್ತೇವೆ. ಹಾಗೆಯೇ ಬಿರ್ಕಾ ಹಾಡಿದಾಗ ನಾವದನ್ನು ಧ್ರುತಕಾಲ ಎಂದು ಭಾವಿಸುತ್ತೇವೆ. ಜಿಎನ್‌ಬಿಯವರು



ಎರಡನ್ನೂ ಸೊಗಸಾಗಿ ಹಾಡುತ್ತಿದ್ದರು. ಜಿಎನ್‌ಬಿ ಎಂದರೆ ಬರೀ ಬಿರ್ಕಾ ಎನ್ನುವುದು ಕೇವಲ ಕಟ್ಟುಕಥೆ. ಅವರದ್ದು ಮೂಲತಃ ಮಧ್ಯಮಕಾಲದ ಸಂಗೀತ. ಅದು ಇವರ ಆಲಾಪನೆಯ ವಿಷಯಕ್ಕೂ ನಿಜ. ಇವರ ಬಿರ್ಕಾಗಳು ಬೆರಗು ಹುಟ್ಟಿಸುತ್ತಿದ್ದವು. ಜನಕ್ಕೆ ಅವೆಲ್ಲಾ ಹೊಸದು, ಅಲ್ಲಿಯವರೆಗೆ ಜನರು ಅಂತಹುದನ್ನು ಕೇಳಿರಲೇ ಇಲ್ಲ. ಹಾಗಾಗಿ ಎಲ್ಲರ ಬಾಯಲ್ಲೂ ಅದೇ ಚರ್ಚಿತವಾಗುತ್ತಿತ್ತು.

ಸಣ್ಣ, ಅಪ್ರಧಾನ ರಾಗಗಳನ್ನು ಜಿಎನ್‌ಬಿ ಬೇರೆಯದೇ ರೀತಿಯಲ್ಲಿ ಹಾಡುತ್ತಿದ್ದರು. ಅವುಗಳನ್ನು ಇವರು ಕ್ರಮಬದ್ಧವಾಗಿ, ಹಂತಹಂತವಾಗಿ ಹಾಡುತ್ತಿರಲಿಲ್ಲ. ಅದೊಂದು ಸರಳರೇಖಾತ್ಮಕವಲ್ಲದ ಅಮೂರ್ತವಾದ ಕ್ರಮ. ಇವರು ಶಹನಾ ಮತ್ತು ಕಿರಣಾವಳಿಯಂಥ ರಾಗಗಳನ್ನು ಹಾಡುವಾಗ ಅದು ಕ್ಯಾನ್ವಾಸಿನ ಮೇಲೆ ಕುಂಚದಿಂದ ಕೆಲವು ರೇಖೆಗಳನ್ನು ಎಳೆದ ಹಾಗೆ ಇರುತ್ತಿತ್ತು. ಅಪರೂಪದ ರಾಗಗಳನ್ನು ಹಾಡುವುದರಲ್ಲಿ ಜಿಎನ್‌ಬಿಯವರದ್ದು ಎತ್ತಿದಕೈ ಎಂದು ನಾವೆಲ್ಲರೂ ಹೇಳುತ್ತೇವೆ. ಆದರೆ ಆ ರಾಗಗಳನ್ನು ಇವರು ಹೆಚ್ಚು ವಿಸ್ತರಿಸುತ್ತಿರಲಿಲ್ಲ ಎನ್ನುವುದನ್ನು ನಾವು ಯಾರೂ ಹೇಳುವುದೇ ಇಲ್ಲ. ಬಹುಶಃ ಅವರಿಗಿಂತ ಹಿಂದೆ ಚಂಚು ಕಾಂಬೋಧಿಯನ್ನು ಬಹುಶಃ ಯಾರೂ ಹಾಡಿಯೇ ಇರಲಿಲ್ಲವೇನೋ. ಆದರೆ ಜಿಎನ್‌ಬಿಯವರು ಅಂತಹ ರಾಗಗಳನ್ನು ದೀರ್ಘವಾಗಿ ಹತ್ತು ನಿಮಿಷಗಳ ಕಾಲ ವಿಸ್ತಾರವಾಗಿ ಹಾಡುತ್ತಿರಲಿಲ್ಲ. ಅವರಿಗೆ ರಾಗಗಳ ಮಿತಿ ತುಂಬಾ ಚೆನ್ನಾಗಿ ತಿಳಿದಿತ್ತು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ರಾಗಗಳನ್ನು ಅನ್ವೇಷಿಸುತ್ತಿದ್ದರು. ಇವರ ಚುಟುಕು ಆಲಾಪನೆಗಳೂ ವಿಸ್ತಾರವಾದ ರಾಗಾಲಾಪನೆಯಷ್ಟೇ ಉಜ್ವಲವಾಗಿರುತ್ತಿದ್ದವು.

ಒಂದು ರಾಗವನ್ನು ಕೌಶಲಪೂರ್ಣವಾಗಿ ನಿರೂಪಿಸಲು ಕೃತಿಗಳಲ್ಲಿ ವ್ಯವಹರಿಸಿರುವ





ಅರಿಯಾಕ್ಕುಡಿಯವರ ಸಂಗೀತವನ್ನು ಕೇಳುತ್ತಿರುವ ಜಿಎನ್‌ಬಿ

ಸಂಗತಿಗಳನ್ನು ಬಳಸಬೇಕೇ ಅಥವಾ ಒಂದು ಕ್ರಮವನ್ನು ಬಳಸಿ ನಿರೂಪಿಸಬೇಕೇ, ಎನ್ನುವುದರ ಬಗ್ಗೆ ಜಿಎನ್‌ಬಿಯವರು ಜನರ ಯೋಚನಾ ಕ್ರಮವನ್ನೇ ಬದಲಿಸಿಬಿಟ್ಟರು. ಆರೋಹ-ಅವರೋಹವನ್ನಿಟ್ಟುಕೊಂಡು ಕ್ರಮಬದ್ಧವಾಗಿ, ಹಂತಹಂತವಾಗಿ, ಸ್ವರಸ್ಥಾನಗಳನ್ನು ಆಧರಿಸಿ ರಾಗವನ್ನು ವ್ಯವಸ್ಥಿತವಾಗಿ ಬೆಳೆಸುವ ಕಡೆಗೆ ಜನರ ಆಲೋಚನೆಯನ್ನು ಹೊರಳಿಸಿದರು. ಈ ಮೂಲಕ ರಾಗವನ್ನು ಗ್ರಹಿಸುವ ಕ್ರಮದಲ್ಲೇ ಒಂದು ಪಲ್ಲಟವನ್ನುಂಟುಮಾಡಿದರು. ಅವರು ಬೇರೆ ಬೇರೆ ರಾಗಗಳನ್ನು ನಿರ್ವಹಿಸುತ್ತಿದ್ದ ರೀತಿಯಲ್ಲಿ ಇದು ವ್ಯಕ್ತವಾಗುತ್ತಿತ್ತು. ಹೀಗಾಗಿಯೇ ರಾಗದ ಒಟ್ಟು ಬಂಧಕ್ಕೆ ಹೊಂದಿಕೊಳ್ಳದ ಸಂಗತಿಗಳನ್ನು ಅವರು ಬಿಟ್ಟೇ ಬಿಡುತ್ತಿದ್ದರು. ಕೃತಿಗಳಲ್ಲೂ ಒಂದಿಷ್ಟು ಬದಲಾವಣೆಗಳನ್ನು ಮಾಡಿಕೊಳ್ಳುತ್ತಿದ್ದರು. ಆನಂದಭೈರವಿಯ ಮರಿವೇರೆ ಕೃತಿಯಲ್ಲಿ ಸ್ವರಸಾಹಿತ್ಯವನ್ನು ಹಾಡುವಾಗ ಅವರು "ಪದಪಮಗಾ" ಎಂದು ಹಾಡುವುದಕ್ಕೆ ಬದಲಾಗಿ "ಪನಿಪಮಗಾ" ಎಂದು ಹಾಡುತ್ತಿದ್ದರು. ಏಕೆಂದರೆ ಅಲ್ಲಿ ದೈವತವು ನಿಷಾದದ ಸ್ಥಾನದಲ್ಲಿ ನುಡಿಯುತ್ತದೆ. ಹಾಗಾಗಿ ಅವರ ಪ್ರಕಾರ ಇಲ್ಲಿ ದೈವತಕ್ಕೆ ಬದಲು ನಿಷಾದವನ್ನು ಹಾಡುವುದೇ ಹೆಚ್ಚು ಸೂಕ್ತವೆನಿಸಿತ್ತು. ಕಛೇರಿ ಕಲಾವಿದರಲ್ಲಿ ಇಂತಹ ಬೌದ್ಧಿಕತೆ ತುಂಬಾ ಅಪರೂಪ. ಜಿಎನ್‌ಬಿಯವರು ಸ್ವರಸ್ಥಾನವನ್ನಾಧರಿಸಿದ ರಾಗದ ಮೂರ್ಛನೆಗೇ ಹೆಚ್ಚಿನ ಪ್ರಾಮುಖ್ಯ ನೀಡುತ್ತಿದ್ದರೂ ಕೂಡ ಕೃತಿಯಾಧಾರಿತ ಲಕ್ಷ್ಯದೊಂದಿಗೆ ಒಂದು ಸಮತೋಲನವನ್ನು ಸಾಧಿಸಿಕೊಂಡಿದ್ದರು.

ಜಿಎನ್‌ಬಿ ಅರಿಯಾಕ್ಕುಡಿಯವರನ್ನು ತನ್ನ ಮಾನಸಿಕ ಗುರು ಎಂದು ಭಾವಿಸಿದ್ದು, ಅವರನ್ನು ಅಪಾರವಾಗಿ ಗೌರವಿಸುತ್ತಿದ್ದರು. ಹಾಗಿದ್ದರೂ ಅರಿಯಾಕ್ಕುಡಿ ರೂಪಿಸಿದ್ದ ಕಛೇರಿ ಪದ್ಧತಿಯಲ್ಲಿ ಹಲವಾರು ಬದಲಾವಣೆಗಳನ್ನು ಜಿಎನ್‌ಬಿ ಮಾಡಿಕೊಂಡಿದ್ದರು. ಹಿಂದೆ ಹಾಡುತ್ತಿದ್ದುದಕ್ಕಿಂತ ಹೆಚ್ಚು ಕೃತಿಗಳನ್ನು ಅರಿಯಾಕ್ಕುಡಿಯವರ ಕಛೇರಿ ಪದ್ಧತಿಯಲ್ಲಿ ಹಾಡುತ್ತಿದ್ದರು. ಅಲ್ಲಿ ಕಲ್ಪನಾ ಸಂಗೀತಕ್ಕಿಂತ ಕಲ್ಪಿತ ಸಂಗೀತವೇ ಹೆಚ್ಚಾಗಿತ್ತು. ಆದರೆ ಜಿಎನ್‌ಬಿ ಇದನ್ನು ಬದಲಿಸಿದರು. ಅವರು ಆಲಾಪನೆ, ತಾನ, ಕಲ್ಪನಾಸ್ವರ ಹೀಗೆ ಮನೋಧರ್ಮಕ್ಕೆ, ಕಲ್ಪನೆಗೆ ತುಂಬಾ ಪ್ರಾಮುಖ್ಯ ನೀಡಿದರು. ಇದರಿಂದ ಅವರು ತನ್ನ ಕಾಲದ ಉಳಿದೆಲ್ಲಾ ಗಾಯಕರಿಗಿಂತ ತುಂಬಾ ಭಿನ್ನವಾಗಿದ್ದರು. ಏಕೆಂದರೆ



ಉಳಿದವರು ತುಂಬಾ ವಿಸ್ತಾರವಾದ ಆಲಾಪನೆಯನ್ನು ಮಾಡುತ್ತಿರಲಿಲ್ಲ. ಜಿಎನ್‌ಬಿಯವರ ರಾಗ ತಾನ ಪಲ್ಲವಿಗಳ ಪ್ರಸ್ತುತಿಯಲ್ಲಿಯೂ ರಾಗ ಮತ್ತು ತಾನದ್ದೇ ಸಿಂಹಪಾಲು. ಇದೊಂದು ರೀತಿಯಲ್ಲಿ ಅರಿಯಾಕ್ಕುಡಿ ರೂಪಿಸಿದ ಕಛೇರಿ ಪದ್ಧತಿಗಿಂತ ಹಿಂದಿದ್ದ ವ್ಯವಸ್ಥೆಗೆ ಮರಳಿಹೋಗುವ ಪ್ರಕ್ರಿಯೆಯಂತಿತ್ತು.

ಲೀಲಾಜಾಲವಾಗಿ, ಸುಲಲಿತವಾಗಿ ಹರಿಯುತ್ತಿದ್ದ ಅವರ ಸಂಗೀತ ಎಲ್ಲರನ್ನು ಆವರಿಸಿಕೊಂಡುಬಿಡುತ್ತಿತ್ತು ಆದರೂ ಅವರ ಕೃತಿಪ್ರಸ್ತುತಿಯಲ್ಲಿ ಒಂದು ಶಿಸ್ತಿತ್ತು. ಕೃತಿಯ ಘನತೆ ಮತ್ತು ಕ್ರಮಬದ್ಧತೆಗೆ ಕುಂದಾಗದಂತೆ, ಯಾವ ರಾಜಿಯನ್ನೂ ಮಾಡಿಕೊಳ್ಳದೆ ತುಂಬಾ ಸ್ಪಷ್ಟವಾಗಿ ಹಾಡುತ್ತಿದ್ದರು. ಹೀಗಾಗಿ ಅವರ ಕೃತಿಪ್ರಸ್ತುತಿ ತುಂಬಾ ಚೊಕ್ಕವಾಗಿರುತ್ತಿತ್ತು.

ಇಂದು ಕಲ್ಪನಾಸ್ವರಗಳನ್ನು ಹಾಡುವಾಗ ಮೊರುತ್ತಂಗಳನ್ನು ಹಾಕುವುದು ಸರ್ವೇಸಾಮಾನ್ಯ. ಇದರ ಮೂಲವನ್ನು ಜಿಎನ್‌ಬಿ ಅವರಲ್ಲಿ ಕಾಣಬಹುದು. ಒಂದು ಸಾಹಿತ್ಯಭಾಗದ ಕಲಾತ್ಮಕತೆಗೆ ಹೊಂದುವಂತಹ ಸ್ವರಗಳನ್ನು ಹಾಡುವ ಪರಿಪಾಠ ಪ್ರಾರಂಭವಾದದ್ದೇ ಇವರಿಂದ. ಆ ಮಹಾನ್ ವ್ಯಕ್ತಿಯ ಆಲೋಚನಾ ಪ್ರಕ್ರಿಯೆಗೆ ಇದೂ ಕೂಡ ಹೊಂದಿಕೊಳ್ಳುತ್ತಿತ್ತು. ಸಾಮಾನ್ಯವಾಗಿ ಜಿಎನ್‌ಬಿ ತುಂಬಾ ದೀರ್ಘವಾದ ಕಲ್ಪನಾಸ್ವರಗಳನ್ನು ಹಾಡುತ್ತಿರಲಿಲ್ಲ. ಹಾಗಿದ್ದರೂ ಅವರ ಪ್ರಸ್ತುತಿಯಲ್ಲಿ ಮೊರುತ್ತಂಗಳ ಬಳಕೆ ಕಂಡುಬರುತ್ತಿತ್ತು.

ಪಲ್ಲವಿಯ ನಂತರ ತುಂಬ ವಿಭಿನ್ನ ಬಗೆಯ ರಚನೆಗಳನ್ನು ಹಾಡುವ ಪರಿಪಾಠವನ್ನು ಪ್ರಾರಂಭಿಸಿದ್ದೂ ಇವರೇ. ಎಂ.ಎಸ್ ಕೂಡ ತುಕಡಾಗಳನ್ನು ಹಾಡುತ್ತಿದ್ದರು. ಹೌದು, ಅರಿಯಾಕ್ಕುಡಿಯವರು ಕೂಡ ಒಂದು ಭಜನ್ ಹಾಡಿದ್ದಾರೆ! ಆದರೆ ಕಛೇರಿಯಲ್ಲಿ ಪಲ್ಲವಿ ನಂತರದ ಭಾಗವನ್ನು ಅತ್ಯಂತ ಆಕರ್ಷಣೀಯವೆನಿಸುವಂತೆ ಮಾಡಿ, ಜನ ಅದಕ್ಕಾಗಿ ಕಾದು ಕುಳಿತು ಕೇಳುವಂತೆ ಮಾಡಿದ ಮೊದಲಿಗರಲ್ಲಿ ಜಿಎನ್‌ಬಿಯವರೂ ಒಬ್ಬರು. ಇವರು ತಿರುಪ್ಪುಗಳ್, ಪದಂ, ಜಾವಳಿಗಳನ್ನಷ್ಟೇ ಅಲ್ಲದೆ, ಅರೆಶಾಸ್ತ್ರೀಯ ಗೀತೆಗಳನ್ನೂ ಹಾಡುತ್ತಿದ್ದರು. ಕಲ್ಯಾಣಿಯಂಥ ರಾಗಗಳಲ್ಲಿ ಲಘುವಾದ, ಮನರಂಜನೀಯವಾದ ವಿಭಿನ್ನ ಬಗೆಯ ರಚನೆಗಳನ್ನು ಹಾಡುತ್ತಿದ್ದರು. ಅವರ ಕಾಂಬೋಧಿಗಾಗಿ ಜನ ಎಷ್ಟು

ಹಾತೊರೆಯುತ್ತಿದ್ದರೋ ಅಷ್ಟೇ ಕಾತರದಿಂದ ಅವರು ಹಾಡುತ್ತಿದ್ದ ರಾಧಾಮುಖ, ರಾಧಾಸಮೇತ ಕೃಷ್ಣ ಅಥವಾ ಕಣ್ಣನೇ ಎನ್ ಕಣವನ್ ಮುಂತಾದ ಗೀತೆಗಳಿಗಾಗಿ ಕಾಯುತ್ತಿದ್ದರು.

ಹಾಗಾದರೆ ಜಿಎನ್‌ಬಿ ನಂತರದ ಕಾಲದ ಮೇಲೆ ಜಿಎನ್‌ಬಿಯವರ ಪ್ರಭಾವವೇನು? ಇಲ್ಲಿ ಜಿಎನ್‌ಬಿ ಪ್ರಭಾವ ಎಂದು ಮಾತನಾಡುವಾಗ ವ್ಯಕ್ತಿಯಾಗಿ ಅವರ ಪ್ರಭಾವವನ್ನು ಕುರಿತು ಮಾತನಾಡುತ್ತಿಲ್ಲ. ಬೇರೆ ಬೇರೆ ಸಂಗೀತಗಾರರು ಇವರ ಸಂಗೀತವನ್ನು ಹೇಗೆ ವ್ಯಾಖ್ಯಾನಿಸಿಕೊಂಡಿದ್ದಾರೆ ಮತ್ತು ಅದರಿಂದ ಹೇಗೆ ಪ್ರಭಾವಿತರಾಗಿದ್ದಾರೆ ಎನ್ನುವುದರ ಬಗ್ಗೆ ಮಾತನಾಡುತ್ತಿದ್ದೇನೆ.

ಆಧುನಿಕ ಕಾಲದಲ್ಲಿ ಕರ್ನಾಟಕ ಸಂಗೀತದಲ್ಲಿ 'ಕಂಠ' (ವಾಯ್ಸ್) ಎನ್ನುವುದಕ್ಕಿರುವ ಅಪರಿಮಿತವಾದ ಸಾಧ್ಯತೆ ಮತ್ತು ಸಾಮರ್ಥ್ಯಗಳನ್ನು ಲೋಕಕ್ಕೆ ತೋರಿಸಿಕೊಟ್ಟವರು ಬಹುಶಃ ಜಿಎನ್‌ಬಿ ಅವರು. ಸ್ವತಃ ಕಲಾವಿದನಾಗಿದ್ದುಕೊಂಡು ಪ್ರಶ್ನೆಗಳನ್ನು ಕೇಳುವುದಕ್ಕೆ ಇವರೆಂದೂ ಹಿಂದೆಮುಂದೆ ನೋಡಲಿಲ್ಲ. ಇವರು ಸಂಪ್ರದಾಯದ ಅಂಧಾನುಕರಣೆ ಮಾಡಲಿಲ್ಲ. ಸದ್ದುಗದ್ದಲವಿಲ್ಲದೆ ಸಂಗೀತದಲ್ಲಿ ಕ್ರಾಂತಿ ಮಾಡಿದರು. ವೈಯಕ್ತಿಕ ಮಟ್ಟದಲ್ಲಿ ಸಂಗೀತದೊಳಗೆ ಸಾಧ್ಯವಾವಿರುವ ಎಲ್ಲಾ ಮಾರ್ಪಾಡುಗಳನ್ನೂ ಮಾಡಿದರು. ಇವರು ಯಾರೊಡನೆಯೂ ಯುದ್ಧಕ್ಕೆ ನಿಲ್ಲಲಿಲ್ಲ. ಒಬ್ಬ ಕರ್ನಾಟಕ ಸಂಗೀತ ಕಲಾವಿದನಾಗಿ ಹಲವು ವಿಚಾರಗಳಲ್ಲಿ ಇವರು ತಮ್ಮ ಕಾಲಕ್ಕಿಂತ ಬಹಳ ಮುಂದಿದ್ದರು. ಜಿಎನ್‌ಬಿ ಅವರ ಸಂಗೀತವನ್ನು ರಾಗಸಂಗೀತ ಎಂದು ಕರೆಯುವುದು ಒಳ್ಳೆಯದೆನಿಸುತ್ತದೆ. ಅವರ ವಿದ್ಯಾರ್ಥಿಗಳಾದ ಎಂಎಲ್‌ವಿ, ಕಲ್ಯಾಣರಾಮನ್ ಮುಂತಾದವರ ಮೇಲೆ ಇವರ ಗಾಢಪ್ರಭಾವವಿತ್ತು.

ಜಿಎನ್‌ಬಿಯವರು ಮಾಡಿದ ಎಷ್ಟೋ ಪ್ರಯೋಗಗಳನ್ನು ನಂತರದ ಸಂಗೀತಗಾರರು ಬೇರೆ ಬೇರೆ ರೀತಿಯಲ್ಲಿ ಅನುಕರಿಸಿದ್ದಾರೆ, ಪುನಾರೂಪಿಸಿದ್ದಾರೆ ಮತ್ತು ಪುನರ್‌ವ್ಯಾಖ್ಯಾನಿಸಿದ್ದಾರೆ. ಇವುಗಳಲ್ಲಿ ಅನುಕರಣೆಗಿಂತ ಹೆಚ್ಚಾಗಿ ಪುನರ್‌ವ್ಯಾಖ್ಯಾನ ಹೆಚ್ಚು ಗೊಂದಲಗಳಿಗೆ ದಾರಿಮಾಡಿಕೊಟ್ಟಿದೆ. ಪುನರ್‌ವ್ಯಾಖ್ಯಾನ ಮಾಡುವಾಗ ಜಿಎನ್‌ಬಿಯವರ ಯಾವುದೋ ಒಂದು ಕಲ್ಪನೆಯನ್ನು ಜಿಎನ್‌ಬಿ ಹಾಗೂ ಅವರ ಸಂಗೀತದ ಸಂದರ್ಭಕ್ಕಿಂತ ಬೇರೆಯದೇ ಆಗಿರುವ ನಮ್ಮ ಸಂದರ್ಭಕ್ಕೆ ಹಾಗೂ ಸಂಗೀತಕ್ಕೆ ಅಳವಡಿಸಿಕೊಂಡಂತಾಗುತ್ತದೆ. ಹೀಗೆ ಮಾಡುವುದು ಕಷ್ಟದ ಕೆಲಸ. ಏಕೆಂದರೆ ಪ್ರತಿ ಸಂಗೀತಗಾರನೂ



ಇನ್ನೊಬ್ಬ ಸಂಗೀತಗಾರನಿಗಿಂತ ಭಿನ್ನ. ಬೇರೆ ಯಾವುದೋ ಸಂದರ್ಭವೊಂದರಲ್ಲಿ ಕಂಡುಕೊಂಡಿದ್ದ ಕಲ್ಪನೆಯೊಂದನ್ನು ನಮ್ಮ ಕಾಲಕ್ಕೆ ತಕ್ಕಂತೆ ಪುನರ್‌ವ್ಯಾಖ್ಯಾನಿಸಲು ಹೋದಾಗ ಮೂಲ ಕಲ್ಪನೆಯೇ ಕಳೆದುಹೋಗುತ್ತದೆ. ಇದರಿಂದ ಎರಡು ತೊಂದರೆಗಳಾಗಿವೆ. ಮೊದಲನೆಯದಾಗಿ, ಮೂಲವನ್ನು ಕುರಿತ ಎಂದರೆ ಜಿಎನ್‌ಬಿಯವರನ್ನು ಕುರಿತ ನಮ್ಮ ಗ್ರಹಿಕೆಯೇ ತಪ್ಪಾಗಿದೆ. ಎರಡನೆಯದಾಗಿ ನಾವು ಜಿಎನ್‌ಬಿ ಅವರಿಗಿದ್ದ ಹದ ಮತ್ತು ಸಮತೋಲನವನ್ನು ಕಳೆದುಕೊಂಡುಬಿಟ್ಟಿದ್ದೇವೆ. ಜಿಎನ್‌ಬಿಯವರು ವಿಶಿಷ್ಟವೆನಿಸಿಕೊಂಡಿದ್ದೇ ಅವರಿಗಿದ್ದ ಈ ಸಮತೋಲನ ಮತ್ತು ಹದದಿಂದ.

ಇದಕ್ಕೊಂದು ಸಣ್ಣ ಉದಾಹರಣೆಯೆಂದರೆ ಜಿಎನ್‌ಬಿಯವರು ಮಾಡುತ್ತಿದ್ದ ಮೊರುತ್ತಂಗಳು. ಮೊರುತ್ತಂ ಎನ್ನುವುದು ತುಂಬ ಕಲಾತ್ಮಕವಾದ ಹಾಗೂ ಆಕರ್ಷಕವಾದ ಕಲ್ಪನೆ. ಆದರೆ ಅದನ್ನು ಅತಿಯಾಗಿ ಮಾಡಿದರೆ ಅದರ ಸೊಗಸೇ ನಾಶವಾಗಿಬಿಡುತ್ತದೆ. ಇಂದು ಆಗಿರುವುದು ಇದೇ ಎನ್ನಿಸುತ್ತದೆ. ಇಂದು ಸಂಗೀತಗಾರರು ಈ ಮೊರುತ್ತಂಗಳನ್ನು ಕಲಿತು, ಪದೇ ಪದೇ ಅಭ್ಯಾಸಮಾಡಿ, ಕಂಠಪಾಠಮಾಡಿ ಪ್ರಸ್ತುತಪಡಿಸುತ್ತಾರೆ. ಹಾಗಾಗಿ ಅವು ತಮ್ಮ ಮೋಹಕತೆಯನ್ನೇ ಕಳೆದುಕೊಂಡುಬಿಟ್ಟಿವೆ.

ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ರಾಗವನ್ನು ಬೆಳೆಸುವುದು ಅಸಾಧಾರಣವಾದ ಸಂಗತಿ ಎನ್ನುವುದು ನಿಜ. ಆದರೆ ಹಾಗೆ ಮಾಡುವುದರಿಂದ ರಾಗದ ವೈವಿಧ್ಯ ಹೋಗಿ ಒಂದು ರೀತಿಯ ಏಕತಾನತೆ ಬರುವುದಿಲ್ಲವೇ? ರಾಗಾಲಾಪನೆಯ ಕ್ರಮ ಹೆಚ್ಚು ಅಮೂರ್ತವಾದಷ್ಟು ರಾಗಕ್ಕೆ ಹೊಸ ಮೆರುಗು ಬರುವುದಿಲ್ಲವೇ? ಜಿಎನ್‌ಬಿಯವರಿಗೆ ತೋಡಿಯನ್ನು ಪ್ರತಿಬಾರಿ ಕ್ರಮಬದ್ಧವಾಗಿ ಆಲಾಪಿಸುವಾಗಲೂ, ಅದನ್ನು ವಿಭಿನ್ನವಾಗಿ ಆಲಾಪಿಸುವ ಸಾಮರ್ಥ್ಯವಿತ್ತು. ಆದರೆ ಇಂದೇನಾಗಿದೆ? ಇಂದು ವಸ್ತುವಿಗಿಂತ ವಿಧಾನವೇ ಮುಖ್ಯವಾಗಿಬಿಟ್ಟಿದೆ. ಇಂದು ಎಲ್ಲರೂ ಜಿಎನ್‌ಬಿ ರೂಪಿಸಿದ ಕ್ರಮಬದ್ಧ ಆಲಾಪನಾ ವಿಧಾನವನ್ನು ಪರಮನಿಷ್ಠೆಯಿಂದ ಅನುಸರಿಸುತ್ತಾರೆ. ಆದರೆ ಜಿಎನ್‌ಬಿಯವರ ಆಲಾಪನೆಯಲ್ಲಿದ್ದ ವೈವಿಧ್ಯ ಮಾತ್ರ ಕಾಣೆಯಾಗಿದೆ. ಇಂದಿನವರ ಆಲಾಪನೆ ಸಾಮಾನ್ಯವಾಗಿ ಯಾವಾಗಲೂ ಅದೇ ಹಳಸಲು. ಒಂದು ಸ್ಥಿರವಾದ ಕ್ರಮವನ್ನು ಇಟ್ಟುಕೊಂಡು ಮನೋಧರ್ಮವನ್ನು ಸೃಜನಶೀಲವಾಗಿ, ತಾಜಾ ಆಗಿ ಇಟ್ಟುಕೊಳ್ಳುವುದು ನಮಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಜಿಎನ್‌ಬಿ ರೂಪಿಸಿರುವ ವಿಧಾನವೊಂದು ನಮಗೆ ಇಲ್ಲದೇ ಹೋಗಿದ್ದರೆ, ಬೇರೊಂದು ಬಗೆಯ ಆಲೋಚನೆ ನಮಗೆ ಅನಿವಾರ್ಯವಾಗುತ್ತಿತ್ತೇ ಮತ್ತು ಇನ್ನೂ ಉತ್ತಮ ಸೃಜನಶೀಲತೆಯ ಹುಡುಕಾಟ ಸಾಧ್ಯವಾಗುತ್ತಿತ್ತೇ ಎನ್ನುವುದು ಯೋಚಿಸಬೇಕಾದ ಅಂಶ.

ಆರೋಹ-ಅವರೋಹ ಕ್ರಮವನ್ನಾಧರಿಸಿ ರಾಗವನ್ನು ಬೆಳೆಸುವ ಕಲ್ಪನೆ ತುಂಬಾ ಆಸಕ್ತಿದಾಯಕವಾದ ಕ್ರಮ. ನಾನು ಈ ಮೊದಲೇ ಹೇಳಿದಂತೆ ಅಭ್ಯಾಸಗಾಯನದಲ್ಲಿರುವ ರಾಗ ವಿಸ್ತರಣೆ (ಲಕ್ಷ್ಯ) ಮತ್ತು ಸ್ವರಸ್ಥಾನಗಳ ಅನುಕ್ರಮಣಿಕೆಯನ್ನು ಆಧರಿಸಿದ ರಾಗ ವಿಸ್ತರಿಸುವ ಕ್ರಮಗಳ ನಡುವೆ ಜಿಎನ್‌ಬಿಯವರಿಗೆ ಒಂದು ಸಮತೋಲನ ಸಾಧ್ಯವಾಗಿತ್ತು. ಆದರೆ ಜಿಎನ್‌ಬಿಯವರ ನಂತರದಲ್ಲಿ ಏನಾಯಿತು? ಕ್ರಮಬದ್ಧ ಆಲಾಪನೆಯ ಕಲ್ಪನೆಗಿದ್ದ ನಿಷ್ಠೆಯು ರಾಗದ ಗ್ರಹಿಕೆಗೆ ಮುಳುವಾಗಿಬಿಟ್ಟಿತು. ಜಿಎನ್‌ಬಿಯವರ ಈ ಕಲ್ಪನೆ ನಮ್ಮ ಇಂದಿನ ವ್ಯವಸ್ಥೆಯಲ್ಲಿ ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಲಕ್ಷ್ಯವನ್ನಾಧರಿಸಿದ ರಾಗಗಳಿಗೂ ಮತ್ತು

ಸ್ವರಸ್ಥಾನಗಳನ್ನಾಧರಿಸಿದ ರಾಗಗಳಿಗೂ ವ್ಯತ್ಯಾಸವಿರಲೇಬೇಕು. ಬಹಳಷ್ಟು ರಾಗಗಳು ಕಲಾತ್ಮಕ ಪರಿಕಲ್ಪನೆಗಳ ಒಂದು ಸಂಗ್ರಹ. ಇದನ್ನು ನಾವು ಕೃತಿಗಳ ಮೂಲಕ ಕಲಿತುಕೊಳ್ಳುತ್ತೇವೆ. ಇದರರ್ಥ ರಾಗ ಎನ್ನುವುದು ಒಂದು ವಿನ್ಯಾಸಕ್ಕೇ ಸೀಮಿತವಾಗಬೇಕಾದ ಅವಶ್ಯಕತೆಯಿಲ್ಲ ಎಂದಾಗುತ್ತದೆ. ದುರದೃಷ್ಟವೆಂದರೆ ವಿನ್ಯಾಸಬದ್ಧ ರಾಗಗ್ರಹಿಕೆಯ ಕ್ರಮವು, ರಾಗದ ಕಲಾತ್ಮಕತೆಯನ್ನೇ ನಾಶಮಾಡಿಬಿಟ್ಟಿದೆ. ಹಲವು ಸಂಗೀತಗಾರರು ಅದು ಅವರಿಗೆ ಸರಿ ಅನ್ನಿಸದ ಕಾರಣದಿಂದಾಗಿ, ರಾಗದ ಕೆಲವು ಪ್ರಯೋಗಗಳು ಅಷ್ಟೊಂದು ಸೊಗಸಾಗಿಲ್ಲ, ಅವು ರಾಗಕ್ಕೆ ಹೊಂದಿಕೊಳ್ಳುವುದಿಲ್ಲ ಎಂದು ಪಾಠಾಂತರವನ್ನೇ ನಿರಂತರವಾಗಿ ಬದಲಾಯಿಸುತ್ತಿದ್ದಾರೆ. ದುರ್ದೈವವೆಂದರೆ ಈ ಪ್ರಯೋಗಗಳು ಈ ರಾಗಗಳಲ್ಲಿವೆ, ಇವುಗಳಿಗೊಂದು ಇತಿಹಾಸವಿದೆ ಎನ್ನುವುದನ್ನೇ ಇಂದಿನವರು ಅರ್ಥಮಾಡಿಕೊಂಡಿಲ್ಲ. ರಾಗಗಳನ್ನು ತುಂಬಾ ವ್ಯವಸ್ಥಿತಗೊಳಿಸಿ ಕ್ರಮಬದ್ಧಗೊಳಿಸುತ್ತಿದ್ದೇವೆ ಎಂದು ನಾವೇನಾದರೂ ಭಾವಿಸಿಕೊಂಡಿದ್ದರೆ ಬಹುಶಃ ಅದಕ್ಕಿಂತ ದೊಡ್ಡ ಮೂರ್ಖತನ ಮತ್ತೊಂದಿಲ್ಲ. ವಾಸ್ತವವಾಗಿ ನಾವು ರಾಗಗಳನ್ನು ಸರಳಗೊಳಿಸಿ, ಹೆಚ್ಚು ಅಮೂರ್ತವಾದ ಕಲ್ಪನೆಯೊಂದನ್ನು ನಾಶಮಾಡುತ್ತಿದ್ದೇವೆ ಅಷ್ಟೆ. ಸಮಸ್ಯೆ ಇರುವುದು ಜಿಎನ್‌ಬಿಯವರಲ್ಲಿ ಅಥವಾ ಬೇರೆ ಮಹಾನ್ ಕಲಾವಿದರಲ್ಲಲ್ಲ. ಸಮಸ್ಯೆ ಇರುವುದು ನಮ್ಮ ತಪ್ಪು ಗ್ರಹಿಕೆಯಲ್ಲಿ. ಅವರು ಮಾಡಿದ್ದೆಲ್ಲವನ್ನೂ ನಾವು ನಮ್ಮ ಸಂಗೀತದಲ್ಲಿ ಮತ್ತು ನಮ್ಮ ಪ್ರಸ್ತುತಿಯಲ್ಲಿ ತುರುಕುತ್ತಿದ್ದೇವೆ. ಈ ಮಹಾನ್ ಕಲಾವಿದರೆಲ್ಲರೂ ತಮ್ಮ ಶೈಲಿ ಹಾಗೂ ಆಲೋಚನೆಗೆ ಹೊಂದಿಕೊಳ್ಳುವುದನ್ನು ಮಾತ್ರ ಮಾಡಿದರು. ಆದರೆ ಅದನ್ನು ಪುನರ್‌ವ್ಯಾಖ್ಯಾನಿಸಲು ಹೊರಟ ನಾವು ಅವರ ಸಂಗೀತವೇ ಬೇರೆ ನಮ್ಮ ಸಂಗೀತವೇ ಬೇರೆ ಎನ್ನುವ ಸರಳ ಸತ್ಯವನ್ನೇ ಗ್ರಹಿಸದೆ ಹೋದೆವು. ಈ ಮೂರ್ಖತನದಿಂದ ನಾವು ಮಾಡಿದ್ದೇನೆಂದರೆ, ಅವರ ಸಂಗೀತವನ್ನು ತಪ್ಪುತಪ್ಪಾಗಿ ವ್ಯಾಖ್ಯಾನಿಸಿದ್ದು.

ನಾವು ಈ ಮಹಾನ್ ಕಲಾವಿದರ ದಿಕ್ಕಿನಲ್ಲೇ ಯೋಚಿಸಬೇಕು. ನಾವು ಮೊದಲು ಸ್ವತಃ ನಮ್ಮನ್ನು, ನಮ್ಮ ಸಂಗೀತವನ್ನು ಹಾಗೂ ನಮ್ಮ ವಿಚಾರಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅದಾದ ಮೇಲೆ ಯಾವುದು ನಮಗೆ ಹೊಂದಿಕೊಳ್ಳುತ್ತದೆ ಎಂದು ನಿರ್ಧರಿಸಬೇಕು. ನಮ್ಮ ಹಿಂದಿನ ಮಹಾನ್ ಕಲಾವಿದರ ಪ್ರಭಾವ ನಮ್ಮ ಮೇಲೆ ಆಗಿದೆ ನಿಜ. ಆದರೆ ಯಾವುದೇ ಕಲ್ಪನೆಯನ್ನು ಬಳಸಿಕೊಂಡು ಅದನ್ನು ಬೆಳೆಸುವ ಪ್ರಯತ್ನಕ್ಕೆ ಕೈಹಾಕಿದಾಗ, ನಮಗೆ ಅದನ್ನು ತುಂಬ ಅತಿಗೆ ತೆಗೆದುಕೊಂಡು ಹೋಗುವ ಪ್ರವೃತ್ತಿ ಇದೆ. ಇದು ಹೀಗೆ ಬಹುಕಾಲ ಮುಂದುವರೆದರೆ, ಮೂಲ ಕಲ್ಪನೆಯೇ ವಿಕೃತಗೊಂಡುಬಿಡುತ್ತದೆ.

ಮೂಲ:
***Influence of His Music Gandharva Ganam GN Balasubramaniam Centenary Commemorative Volume. Ed by Lalitha Ram, V. Ramnarayan.***